# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.02 | Issue. 245 | Pages. 2 | Date: 10-09-2026, THURSDAY RNI NO: KARKAN/2024/89601 Kannada Daily

ಸಂಪುಟ : 02 - ಸಂಚಿಕೆ : 245 - ಪುಟಗಳು : 2 10-09-2026 ಗುರುವಾರ Ph: 8762954248 ದರ : ₹1


## ರಾಜ್ಯಾದ್ಯಂತ 4896 ದೂರು ಸಲ್ಲಿಕೆ: ಡಾ. ಮೂರ್ತಿ

### ಅನುಸೂಚಿತ ಜಾತಿ-ಬುಡಕಟ್ಟು ಆಯೋಗದ ಸಭೆ | ಅಧಿಕಾರಿಗಳಿಂದ ಮಾಹಿತಿ ಸಂಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯದಲ್ಲಿ 4896 ದೂರು ಅರ್ಜಿಗಳು ಆಯೋಗಕ್ಕೆ ಬಂದಿದ್ದು,1482 ಪ್ರಕರಣ ನ್ಯಾಯಾಲಯದ ಮೂಲಕ ನಡೆಯುತ್ತಿವೆ, ಜಿಲ್ಲೆಗೆ ಸಂಬಂಧಿಸಿ 82 ಅರ್ಜಿ ಆಯೋಗದಲ್ಲಿವೆ ಎಂದು ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ. ಮೂರ್ತಿ ಎಲ್ ಅವರು ತಿಳಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಬುಧವಾರ ಕುಂದು ಕೊರತೆಗಳ ಅಹವಾಲು ಸ್ವೀಕರಿಸಿ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಲ್ಲಿಕೆಯಾದ ಅರ್ಜಿಗೆ ಪರಿಹಾರ ಕಲ್ಪಿಸಲು ವಿವಿಧ ಇಲಾಖೆಗಳ ರಾಜ್ಯ ಮಟ್ಟದ ಹಿರಿಯ ಅಧಿಕಾರಿಗಳೊಂದಿ ಗೆ ಚರ್ಚಿಸಲಾಗಿದೆ. 4896ರಲ್ಲಿ 1850 ಅರ್ಜಿಗಳು ಜಮೀನಿನ ಸಮಸ್ಯೆಗೆ ಸೇರಿವೆ ಎಂದು ತಿಳಿಸಿದರು.

ಪಿ.ಟಿ.ಸಿ.ಎಲ್ ಪ್ರಕರಣಗಳನ್ನು ಇತ್ಯರ್ಥ ಮಾಡುವುದು ಉಪವಿಭಾಗಾಧಿಕಾರಿ ಜವಾಬ್ದಾರಿ. ಅಲ್ಲಿ ತೀರ್ಮಾನ ಆಗದಿದ್ದರೆ ಜಿಲ್ಲಾಧಿಕಾರಿಗೆ ಹೋಗುತ್ತದೆ. ಇಂತಹ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಕಂದಾಯ ಸಚಿವರು ಹಾಗೂ ಇಲಾಖೆಯ ಕಾರ್ಯದರ್ಶಿ ಅವರಿಗೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

#### 182 ಅರ್ಜಿ ಸ್ವೀಕಾರ

ಇಂದಿನ ಸಭೆಯಲ್ಲಿ 280 ಜನರು ಭಾಗವಹಿಸಿದ್ದರು.182 ಅರ್ಜಿ ಸ್ವೀಕರಿಸಲಾಗಿದ್ದು, ವಿಲೇವಾರಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದರಲ್ಲದೆ, ಯಾವ ವಿಷಯಗಳು ಗಂಭೀರವಾಗಿವೆ ಅವುಗಳನ್ನು ಪರಿಹರಿಸಲು ಅಧಿಕಾರಿಗಳಿಗೆ ಚಾಟಿ ಬೀಸಲಾಗುವುದು ಎಂದು ತಿಳಿಸಿದರು.



ಗ್ರಾಮೀಣ ಭಾಗದ ನೊಂದವರ ಸಮಸ್ಯೆಗಳನ್ನು ಆಲಿಸಿ ಶೀಘ್ರ ವಿಲೇವಾರಿ ಮಾಡದೆ ಇರುವ ಕಾರಣ ಸಮಸ್ಯೆಗಳು ಹೆಚ್ಚುತ್ತಿವೆ ಎಂದ ಅವರು ಈ ನಿಟ್ಟಿನಲ್ಲಿ ಸರ್ಕಾರಕ್ಕೆ ಕೆಲವು ಶಿಫಾರಸುಗಳನ್ನು ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ಮಲೆನಾಡಿನಲ್ಲಿ 105 ಪೋಕ್ಸೋ ಪ್ರಕರಣಗಳಿವೆ. ಇದು ಗಂಭೀರವಾದ ಸಮಸ್ಯೆ ಕೃಷಿಕರು, ಕೂಲಿ ಕಾರ್ಮಿಕರು ಬಯಲು ಪ್ರದೇಶಕ್ಕೆ ಬಹಿರ್ದೆಸೆಗೆ ಹೊದಂತಹ ಸಂದರ್ಭದಲ್ಲಿ ನಡೆದ ಲೈಂಗಿಕ ದೌರ್ಜನ್ಯದಿಂದಲೂ ಪೋಕ್ಸೋ ಪ್ರಕರಣಗಳು ಕಂಡು ಬಂದಿವೆ. ಶೌಚಾಲಯ ಮುಕ್ತ ಪ್ರದೇಶ ಆಗಬೇಕು ಆದರೆ ಸಂಪೂರ್ಣವಾಗಿ ಆಗಿಲ್ಲ. ಶೇ. 99 ರಷ್ಟು ಆಗಿರುವುದು ಸಾಧನೆ ಅಲ್ಲ ಶೇ.1 ರಷ್ಟು ಆಗದೆ ಜನರು ತೊಂದರೆಗೆ ಸಿಲುಕುವುದನ್ನು ತಪ್ಪಿಸಬೇಕು. ಅದು ಬಹುಮುಖ್ಯ ಇದೊಂದು ಸಮಾಜಕ್ಕೆ ಕಳಂಕ ತರುವ ವಿಷಯವಾಗಿದೆ ಎಂದರು.

ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ವಿಶೇಷ ತರಗತಿ ನಡೆಸಲು ಬರುವವರಿಗೆ ಒಂದು ಸಾವಿರ ರೂ. ನೀಡುತ್ತಾರೆ. ಬಿ.ಸಿ.ಎಂ. ಹಾಸ್ಟೆಲ್ ಗಳಲ್ಲಿ ತರಬೇತಿ ನೀಡಲು ಬರುವವರಿಗೆ ಮೂರು ಸಾವಿರ ರೂ ನೀಡುತ್ತಾರೆ. ಈ ರೀತಿ ತಾರತಮ್ಯ ಮಾಡುವಂತಿಲ್ಲ ಎಂದು ತಿಳಿಸಿದರು.

ಖಾತೆ, ಪೌತಿ ಖಾತೆ ಜಂಟಿ ಸರ್ವೆ ಕುರಿತಂತೆ 15 ಅರ್ಜಿಗಳು ಬಂದಿವೆ. ಯಾವುದೇ ವಿಳಂಬ ಮಾಡದೆ ಕಾನೂನು ತೊಡಕಿದ್ದರೆ ಸಂಬಂಧಿಸಿದ ಅಧಿಕಾರಿಗಳು ಗಮನ ಹರಿಸಿ ಲೋಪದೋಷಗಳಿಗೆ ಅವಕಾಶ ನೀಡದೆ ಎರಡು ತಿಂಗಳಲ್ಲಿ ಬಗೆಹರಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡುವುದಾಗಿ ತಿಳಿಸಿದರು.

ಅಲೆಮಾರಿ, ಹಕ್ಕಿಪಿಕ್ಕಿ ಸಮುದಾಯದವರು ಸಮಸ್ಯೆಗಳನ್ನು ಕುರಿತು ಆಯೋಗಕ್ಕೆ ದೂರು ನೀಡಿದ್ದಾರೆ. ಇನ್ನೂ ಒಂದುವರೆ ತಿಂಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

> ಹಾಸ್ಟೆಲ್‌ಗಳಿಗೆ ಮೂಲ ಸೌಕರ್ಯ ಹಾಗೂ ಸುರಕ್ಷತೆ ದೃಷ್ಟಿಯಿಂದ ಎರಡು ಉಪ ವಿಭಾಗದ ಉಪ ವಿಭಾಗಾಧಿಕಾರಿಗಳು ತಂಡ ರಚಿಸಿ ಎರಡು ತಿಂಗಳಿಗೊಮ್ಮೆ ಭೇಟಿ ನೀಡಿ ಪರಿಶೀಲನೆ ನಡೆಸಿ ಲೋಪಗಳನ್ನು ಸರಿಪಡಿಸಿ ಆಯೋಗಕ್ಕೆ ವರದಿ ನೀಡಬೇಕು. ವಿದ್ಯಾರ್ಥಿಗಳ ರಕ್ಷಣೆಗೆ ಪ್ರಥಮ ಆದ್ಯತೆ ನೀಡಬೇಕು.
>
> **- ಡಾ. ಎಲ್.ಮೂರ್ತಿ, ಅಧ್ಯಕ್ಷ ಅನುಸೂಚಿತ ಜಾತಿ-ಬುಡಕಟ್ಟು ಆಯೋಗ ಅಧ್ಯಕ್ಷ**

ಜನರು 5053, 5057 ನಲ್ಲಿ ಅರ್ಜಿ ಸಲ್ಲಿಸಿದ್ದು ಅಕ್ರಮ ಸಕ್ರಮ ಮಾಡುವುದು ವಿಳಂಬವಾಗಿದೆ. ಜನರು ಅಸ್ಥಿತ್ವದಲ್ಲಿದ್ದು, ಆದರೆ ಅವರಿಗೆ ಹಕ್ಕು ಪತ್ರ ನೀಡಿಲ್ಲ. ಜನರನ್ನು ಒಕ್ಕಲೆಬ್ಬಿಸಬಾರದು, ಮೂಲಭೂತ ಸೌಕರ್ಯ ಕಲ್ಪಿಸಬೇಕು. ಸ್ಮಶಾನ ಭೂಮಿ ಸಮರ್ಪಕವಾಗಿ ವಿತರಣೆ ಆಗಬೇಕು. ಈ ನಿಟ್ಟಿನಲ್ಲಿ ಸ್ಮಶಾನ ಭೂಮಿ ನೀಡುವಂತೆ ಆಯೋಗದಿಂದ ಶಿಫಾರಸು ಮಾಡಲಾಗುವುದು ಎಂದು ಹೇಳಿದರು.

ಆಯೋಗದ ಸದಸ್ಯರಾದ ಎಂ. ಕುಂಬಯ್ಯ, ಸುನೀಲ್ ಎಂ. ಉಕ್ಕಲಿ, ಎನ್. ದಿವಾಕರ್, ಗೀತಾ ಥಾಂವಶಿ, ಕಾರ್ಯದರ್ಶಿ ಡಾ.ಹೆಚ್.ಎಸ್.ಶಿವರಾಮು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ, ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಉಪಸ್ಥಿತರಿದ್ದರು.

## ಖರೀದಿ ನೆಪದಲ್ಲಿ ಬಂದು ಮೊಬೈಲ್ ಕದ್ದ ಕಾರ್ಮಿಕರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮೊಬೈಲ್ ಅಂಗಡಿಗೆ ಗ್ರಾಹಕರ ಸೋಗಿನಲ್ಲಿ ಬಂದ ಇಬ್ಬರು ಕಾರ್ಮಿಕರು ಮೊಬೈಲ್ ಎಗರಿಸಿರುವ ಘಟನೆ ಬಾಳ್ಳುಪೇಟೆಯಲ್ಲಿ ನಡೆದಿದೆ.

ಒಡಿಸ್ಸಾ ಮೂಲದ ವಿಕ್ರಂ ಹಾಗೂ ಚೇತನ್ ಬಂಧಿತರು. ಕಾಫಿ ತೋಟಗಳಲ್ಲಿ ಕೆಲಸ ಮಾಡಿಕೊಂಡಿರುವ ಇವರು ಮೊಬೈಲ್ ಕಳವಿಗೆ ಮಾಡಿದ ಯೋಜನೆ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಬಾಳ್ಳುಪೇಟೆಯ ಎ.ಕೆ. ಕಮ್ಯುನಿಕೇಶನ್‌ನಲ್ಲಿ ಮೊಬೈಲ್ ಖರೀದಿ ನೆಪದಲ್ಲಿ ಇಬ್ಬರೂ ಬಂದಿದ್ದರು.

ಮೊಬೈಲ್ ಶಾಪ್ ಮಾಲೀಕ ಹೊರಗಡೆ ಹೋಗಿದ್ದನ್ನು ಖಚಿತಪಡಿಸಿಕೊಂಡು ಒಳಗೆ ಬಂದ ಅವರು ಸಿಬ್ಬಂದಿಯೊಂದಿಗೆ ಮೊಬೈಲ್ ಖರೀದಿ ಕುರಿತು ಮಾತುಕತೆ ನಡೆಸಿದ್ದಾರೆ. ಆರೋಪಿ ಚೇತನ್ ಮೊಬೈಲ್‌ಗಳನ್ನು ಪರಿಶೀಲಿಸುವಂತೆ



ನಾಟಕ ಮಾಡುತ್ತಿದ್ದಾಗ ವಿಕ್ರಂ ಹೊಸ ಮೊಬೈಲ್ ಒಂದನ್ನು ಯಾರಿಗೂ ಗೊತ್ತಾಗದಂತೆ ಶರ್ಟ್ ಒಳಗೆ ಹಾಕಿಕೊಂಡು ಸಾವಧಾನವಾಗಿ ಹೊರಗೆ ಬಂದಿದ್ದಾನೆ. ಕೆಲ ಹೊತ್ತಿನ ಬಳಿಕ ಚೇತನ್ ಸಹ ಅಂಗಡಿಯಿಂದ ಕಾಲ್ಕಿತ್ತಿದ್ದಾನೆ.

ಮಾಲೀಕ ಅಮೀರ್ ಖಾನ್ ಶಾಪ್‌ಗೆ ಬಂದು ಸಿಸಿಟಿವಿ ಪರಿಶೀಲಿಸಿದಾಗ ಕಳ್ಳತನದ ಕರಾಮತ್ತು ಬಯಲಾಗಿದೆ. ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಹೊಸೂರು ಎಸ್ಟೇಟ್‌ನ ಮನೆಯಲ್ಲಿ ಇದ್ದ ಚೇತನ್ ಹಾಗೂ ಬಂದಿಹಳ್ಳಿಯಲ್ಲಿದ್ದ ವಿಕ್ರಂನನ್ನು ಪೊಲೀಸರು ತಡರಾತ್ರಿ ಬಂಧಿಸಿದ್ದಾರೆ.

## ವಾಹನ ಡಿಕ್ಕಿ: ಬೈಕ್ ಸವಾರ ಸಾವು

ಚನ್ನರಾಯಪಟ್ಟಣ: ಅಪರಿಚಿತ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ನಾಗಮಂಗಲ-ಶ್ರವಣಬೆಳಗೊಳ ರಸ್ತೆಯ ಮಂಜುನಾಥಪುರ ಗ್ರಾಮದಲ್ಲಿ ನಡೆದಿದೆ.

ಸಾಣೆಹಳ್ಳಿಕೊಪ್ಪಲು ಗ್ರಾಮದ ಎಸ್.ನಾಗರಾಜು ಮೃತರು. ಶ್ರವಣಬೆಳಗೊಳದ ದೇವೇಗೌಡ ಸರ್ಕಲ್ ಹತ್ತಿರ ಹಾರ್ಡ್‌ವೇರ್ ಅಂಗಡಿ ಇಟ್ಟುಕೊಂಡಿದ್ದ ಅವರು ಮಂಗಳವಾರ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದಾಗ ಅಪರಿಚಿತ ವಾಹನ ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶ್ರವಣಬೆಳಗೊಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅರೆಕಾಲಿಕ ಕಾನೂನು ಸೇವಕರಿಗೆ ತರಬೇತಿ ಶಿಬಿರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾ ನ್ಯಾಯಾಲಯ ಸಭಾಂಗಣದಲ್ಲಿ ರಾಜ್ಯ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘದಿಂದ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ಎರಡು ದಿನಗಳ ಪುನಃಶ್ಚೇತನ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ.

ಶಿಬಿರ ಉದ್ಘಾಟಿಸಿದ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶೆ ಹೇಮಾವತಿ ಮಾತನಾಡಿ, ಆರ್ಥಿಕ ಹಾಗೂ ಸಾಮಾಜಿಕವಾಗಿ ದುರ್ಬಲ ವರ್ಗಗಳ ಜನರಿಗೆ ಕಾನೂನು ಸೇವೆ ಮತ್ತು ನ್ಯಾಯದ ಸೌಲಭ್ಯವನ್ನು ಸುಲಭವಾಗಿ ತಲುಪಿಸುವ ನಿಟ್ಟಿನಲ್ಲಿ ಅರೆಕಾಲಿಕ ಕಾನೂನು ಸ್ವಯಂ ಸೇವಕರು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕು ಎಂದರು.

ಪ್ರತಿಯೊಬ್ಬರಿಗೂ ದೊರೆಯಬೇಕಾದ ಹಕ್ಕುಗಳ ಮಾಹಿತಿ ನೀಡಬೇಕು. ಅರೆಕಾಲಿಕ ಕಾನೂನು ಸ್ವಯಂ ಸೇವಕರು ಈ ತರಬೇತಿಯಲ್ಲಿ ಆಸಕ್ತಿಯಿಂದ ಪಾಲ್ಗೊಂಡು ಸಮಗ್ರ ಮಾಹಿತಿ ಪಡೆದುಕೊಳ್ಳಬೇಕು. ತರಬೇತಿಯಲ್ಲಿ ಕಲಿತ ವಿಷಯಗಳನ್ನು ಸಮಾಜದ ಜನರ ಹಿತಕ್ಕಾಗಿ ಬಳಸಿಕೊಳ್ಳುವ ಮೂಲಕ ತಮ್ಮ ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ವಕೀಲರ ಸಂಘದ ಜಿಲ್ಲಾಧ್ಯಕ್ಷ ಕಾರ್ಲೆ ಮೊಗಣ್ಣಗೌಡ ಮಾತನಾಡಿ, ಕಾನೂನಿನ ಅರಿವು ಪ್ರತಿಯೊಬ್ಬರಿಗೂ ಹಾಗೂ ನ್ಯಾಯದ ಅವಕಾಶ ಎಲ್ಲರಿಗೂ ಸಿಗಬೇಕು ಎಂಬ ಆಶಯದೊಂದಿಗೆ ಕಾನೂನು ಸೇವಾ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿದೆ. ಜನರ ನಡುವೆ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಸಾಮಾನ್ಯ ಜನರ ಸಮಸ್ಯೆಗಳನ್ನು ಆಲಿಸಿ ಅವರಿಗೆ ಯಾವ ರೀತಿಯ ಕಾನೂನು ನೆರವು ಅಗತ್ಯವಿದೆ ಎಂಬುದನ್ನು ಗುರುತಿಸುವಲ್ಲಿ ಕಾನೂನು ಸೇವಾ ಸ್ವಯಂ ಸೇವಕರ ಪಾತ್ರ ಮಹತ್ವದ್ದಾಗಿದೆ. ನ್ಯಾಯದ ಅಗತ್ಯವಿರುವ ವ್ಯಕ್ತಿಗಳನ್ನು ಗುರುತಿಸಿ ಸೂಕ್ತ ಕಾನೂನು ನೆರವು ದೊರೆಯುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದೊಂದಿಗೆ ಸಂಪರ್ಕ ಕಲ್ಪಿಸುವ ಜವಾಬ್ದಾರಿಯನ್ನು ಸ್ವಯಂಸೇವಕರು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ಹೇಳಿದರು. ಎರಡು ದಿನಗಳ ತರಬೇತಿಯಲ್ಲಿ ಪಡೆಯುವ ಕಾನೂನು ಜ್ಞಾನವನ್ನು ಕೇವಲ ವೈಯಕ್ತಿಕ ಪ್ರಯೋಜನಕ್ಕೆ ಸೀಮಿತಗೊಳಿಸದೆ, ಸಮಾಜದ ಒಳಿತಿಗಾಗಿ ಬಳಸಬೇಕು. ವಿಶೇಷವಾಗಿ ದುರ್ಬಲ ವರ್ಗದ ಜನರಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಸ್ವಯಂ ಸೇವಕರು ಸೇತುವೆಯಾಗಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಜಿಲ್ಲಾ ಸರ್ಕಾರಿ ವಕೀಲ ಡಿ.ಟಿ. ಪ್ರಸನ್ನ ಮಾತನಾಡಿ, ಅರೆಕಾಲಿಕ ಕಾನೂನು ಸ್ವಯಂ ಸೇವಕರು ಸಾರ್ವಜನಿಕರು ಮತ್ತು ನ್ಯಾಯಾಂಗ ವ್ಯವಸ್ಥೆಯ ನಡುವಿನ ಪ್ರಮುಖ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹೆಚ್.ಎನ್.ಕುಮಾರ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ, ತರಬೇತುದಾರರಾದ ಕೆ.ವಂದನಾ, ಶಿರೀಷ ಬಿ. ರೆಡ್ಡಿ, ಡಿ.ಸಿ.ಮಂಜೇಶ್, ಜೀವನ್ ಮತ್ತಿತರರಿದ್ದರು.

## ಶಿಕ್ಷಕರ ದಿನಾಚರಣೆ ಇಂದು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಜಿಲ್ಲಾ ಘಟಕದಿಂದ ಸೆ. 10ರ ಗುರುವಾರ ಬೆಳಿಗ್ಗೆ 10.30ಕ್ಕೆ ಜಿಲ್ಲಾ ನಿವೃತ್ತ ನೌಕರರ ಸಮುದಾಯ ಭವನದಲ್ಲಿ ಶಿಕ್ಷಕರ ದಿನಾಚರಣೆ ಮತ್ತು ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ.

ಶಾಸಕ ಹೆಚ್.ಪಿ.ಸ್ವರೂಪ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂಘದ ಅಧ್ಯಕ್ಷ ಎಸ್.ಬೋರೇಗೌಡ ಅಧ್ಯಕ್ಷತೆ ವಹಿಸುವರು. ಲೇಖಕ ಡಾ. ಹಂಪನಹಳ್ಳಿ ತಿಮ್ಮೇಗೌಡ ಉಪನ್ಯಾಸ ನೀಡುವರು. ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಪಿ.ಗಂಗಾಧರ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಎನ್.ಬಲರಾಮ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ ಪಾಲ್ಗೊಳ್ಳಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

## ಪ್ರಿಯಕರನ ಜೊತೆ ಸೇರಿ ಗಂಡನ ಕೊಲೆಗೈದ ಮಹಿಳೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲೂಕಿನ ಬಸವನಹಟ್ಟಿ ಗ್ರಾಮದಲ್ಲಿ ಶುಕ್ರವಾರ ನಡೆದಿದ್ದ ವ್ಯಕ್ತಿಯ ಬರ್ಬರ ಹತ್ಯೆ ಪ್ರಕರಣಕ್ಕೆ ಬಿಗ್ ಟ್ವಿಸ್ಟ್ ಸಿಕ್ಕಿದೆ.

ಶುಂಠಿ ಬೆಳೆಗೆ ನೀರು ಹಾಯಿಸಲು ಹೋಗಿದ್ದ ಮೋಹನ್(34) ಎಂಬ ವ್ಯಕ್ತಿಯನ್ನು ಕೊಲೆ ಮಾಡಲಾಗಿತ್ತು. ಮೊಬೈಲ್ ಕರೆಯ ಮೂಲಕ ಗಂಡಸಿ ಪೊಲೀಸರಿಗೆ ಕೊಲೆಯ ಸುಳಿವು ಸಿಕ್ಕಿದೆ. ಇದನ್ನು ಆಧರಿಸಿ ಆರೋಪಿಗಳನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ ನಂತರ ನಿಜ ರಹಸ್ಯ ಬಯಲಾಗಿದೆ. ಪತ್ನಿಯ ಅಕ್ರಮ ಸಂಬಂಧಕ್ಕೆ ಮೋಹನ್ ಅಡ್ಡಿಯಾಗಿದ್ದ ಕಾರಣಕ್ಕೆ ಪ್ರಿಯಕರ ಮತ್ತು ಕೆಲವರ ಜೊತೆ ಸೇರಿ ಗಂಡನನ್ನೇ ಪತ್ನಿ ಮುಗಿಸಿದ್ದಳು ಎಂಬ ಅಸಲಿ ಕಾರಣ ಬಯಲಾಗಿದೆ.

ಪ್ರಿಯಕರನ ಜೊತೆ ಸೇರಿ ಸುಪಾರಿ ಕೊಟ್ಟು ಕೈ ಹಿಡಿದ ಗಂಡನನ್ನು ಕೊಲೆ ಮಾಡಿಸಿದ್ದ ಪತ್ನಿ ಜಯಲಕ್ಷ್ಮಿ, ಅಂದುಕೊಂಡ ಕೊಲೆ ನಡೆದ ನಂತರ ಏನೂ ಗೊತ್ತಿಲ್ಲದಂತೆ ನಾಟಕವಾಡಿದ್ದಳು.

#### ಘಟನೆ ಹಿನ್ನೆಲೆ

8 ವರ್ಷಗಳ ಹಿಂದೆ ಜಯಲಕ್ಷ್ಮಿ ಜೊತೆ ಮೋಹನ್ ಮದುವೆಯಾಗಿತ್ತು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಆದರೆ ಟ್ರ್ಯಾಕ್ಟರ್‌ಗೆ ಸಿಲುಕಿ ಮೊದಲ ಪುತ್ರಿ ಸಾವನ್ನಪ್ಪಿದ್ದಳು.



ಬಳಿಕ ಬೇರೆಯವರ ಎರಡು ಜಮೀನನ್ನು ಮೋಹನ್ ಭೋಗ್ಯಕ್ಕೆ ಪಡೆದು ಶುಂಠಿ ಬೆಳೆ ಮಾಡಿಕೊಂಡಿದ್ದ. ಯಾವುದೇ ದುಶ್ಚಟಗಳಿಲ್ಲದೆ ತಾನಾಯಿತು, ತನ್ನ ಕೆಲಸವಾಯಿತು ಎಂಬಂತೆ ಕಷ್ಟಪಟ್ಟು ದುಡಿಯುತ್ತಿದ್ದ ಮೋಹನ್, ಪತ್ನಿಗೆ ನಿಷ್ಠನಾಗಿದ್ದ. ಈ ನಡುವೆ ಮೋಹನ್‌ಗೆ ಆಪ್ತ ಸ್ನೇಹಿತನಾಗಿದ್ದ ಧನಂಜಯ ಮೂರ್ತಿ ಎಂಬಾತ, ತನ್ನ ಪತ್ನಿ ಜೊತೆ ಹೊಂದಾಣಿಕೆ ಕೊರತೆಯಿಂದ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದ. ಕ್ರಮೇಣ ಸ್ನೇಹದ ಸೋಗಿನಲ್ಲಿ ಮೋಹನ್ ಪತ್ನಿ ಮೇಲೆ ಕಣ್ಣು ಹಾಕಿದ್ದ ಧನಂಜಯಮೂರ್ತಿ, ಮೋಹನ್ ಪತ್ನಿ ಜಯಲಕ್ಷ್ಮಿ ಜೊತೆ ಅಕ್ರಮ ಸಂಬಂಧ ಹೊಂದಿದ್ದ. ಇಬ್ಬರ ನಡುವಿನ ಚಕ್ಕಂದ ಕೆಲ ದಿನ ಹೀಗೆಯೇ ಮುಂದುವರಿದಿತ್ತು.

### ಶುಂಠಿ ದುಡ್ಡಿನ ಮೇಲೆ ವಕ್ರದೃಷ್ಟಿ

ಏತನ್ಮಧ್ಯೆ ಶುಂಠಿಗೆ ಒಳ್ಳೆಯ ಬೆಲೆ ಇದ್ದುದರಿಂದ ಅದನ್ನು ಮಾರಾಟ ಮಾಡಲು ಮೋಹನ್ ನಿರ್ಧರಿಸಿದ್ದ.ಇದು ಪತ್ನಿಗೆ ತಿಳಿದಿತ್ತು. ಶುಂಠಿ ಮಾರಾಟ ಮಾಡಿದ ದುಡ್ಡು ಪತಿ ಕೈಗೆ ಸಿಗಬಾರದು ಎಂದು ಪ್ರಿಯಕರನ ಜೊತೆ ಸೇರಿ ಕೊಲೆಗೆ ಸ್ಕೆಚ್ ಜಯಲಕ್ಷ್ಮಿ ಸ್ಕೆಚ್ ಹಾಕಿದ್ದಳು ತನ್ನ ಹಾಗೂ ಕುಟುಂಬದ ಹಿತಕ್ಕಾಗಿ ಕಷ್ಟಪಟ್ಟು ದುಡಿಯುತ್ತಿದ್ದ ಪತಿ ಮುಗಿಸಲು ಧನಂಜಯಮೂರ್ತಿ ಜೊತೆ ಸೇರಿ ಜಗದೀಶ್, ಪುಟ್ಟರಾಜು ಎಂಬುವರಿಗೆ 1ಲಕ್ಷ ಹಣ ಕೊಟ್ಟು ಸುಪಾರಿ ನೀಡಿದ್ದಳು. ಪತಿಯನ್ನು ಕೊಂದ ನಂತರ ಶುಂಠಿ ಮಾರಿ ಆ ಹಣದಿಂದ ಎಸ್ಕೇಪ್ ಆಗಲು ನಿರ್ಧರಿಸಿದ್ದ ಜಯಲಕ್ಷ್ಮಿ-ಧನಂಜಯಮೂರ್ತಿ ನಿರ್ಧರಿದ್ದರು.

ಕಳೆದ ಸೆ.2 ರ ರಾತ್ರಿ ಮೋಹನ್‌ನನ್ನು ಮುಗಿಸಲು ಸಂಚು ರೂಪಿಸಿದ್ದರು.

ಆದರೆ ಅಂದು ಮೋಹನ್ ಜಮೀನಿನ ಅಕ್ಕಪಕ್ಕದಲ್ಲೇ ಶುಂಠಿ ಬೆಳೆದಿದ್ದ ರವಿ ಹಾಗೂ ಮಂಜು ಇದ್ದುದರಿಂದ ಅಂದು ಪ್ಲಾನ್ ವಿಫಲವಾಗಿತ್ತು. ಅದಾದ 2 ದಿನಗಳ ಬಳಿಕ ಅಂದರೆ ಸೆ.4 ರಂದು ಮತ್ತೆ ಹಂತಕರು ಪ್ಲಾನ್ ಮಾಡಿ, ಅಂದು ರಾತ್ರಿ ಶುಂಠಿ ಬೆಳೆಗೆ ನೀರು ಹಾಯಿಸಲು ಮೋಹನ್ ತೆರಳಿದ್ದಾಗ, ಧನಂಜಯಮೂರ್ತಿಗೆ ಜಯಲಕ್ಷ್ಮಿ ಫೋನ್ ಮಾಡಿ ವಿಷಯ ತಿಳಿಸಿದ್ದಳು.

ಎಂದಿನಂತೆ ರಾತ್ರಿ ಜಮೀನಿಗೆ ಬಂದು ನೀರು ಹಾಯಿಸಲು ತ್ರಿಫೇಸ್ ವಿದ್ಯುತ್‌ಗಾಗಿ ಮೋಹನ್ ಕಾಯುತ್ತಿದ್ದಾಗ ಅಲ್ಲಿಗೆ ಬಂದ ಜಗದೀಶ್ ಮಾತಿಗಿಳಿದ. ಈ ವೇಳೆ ಹಿಂದಿನಿಂದ ಬಂದ ಹಂತಕರು ರಾಡ್‌ನಿಂದ ಮೋಹನ್ ತಲೆಗೆ ಹೊಡೆದು ಕೊಂದಿದ್ದರು. ನಂತರ ಜಯಲಕ್ಷ್ಮಿಗೆ ಫೋನ್ ಮಾಡಿದ ಪ್ರಿಯಕರ ವಹಿಸಿದ ಕೆಲಸ ಮುಗಿಸಿದ್ದಾಗಿ ತಿಳಿಸಿದ್ದ.

ಇದಾದ ಬಳಿಕವೂ ತನಗೇನು ಗೊತ್ತಿಲ್ಲದಂತೆ ಕಣ್ಣೀರಿಡುತ್ತಾ ಜಯಲಕ್ಷ್ಮಿ ನಾಟಕ ಆರಂಭಿಸಿದ್ದಳು. ಆದರೀಗ ಖಾಕಿ ತನಿಖೆ ವೇಳೆ ಎಲ್ಲ ರಹಸ್ಯ ಬಯಲಾಗಿ ಎಲ್ಲರೂ ಕಂಬಿ ಎಣಿಸುವಂತಾಗಿದೆ.

## ನಾಲೆಗೆ ಬಾರದ ನೀರು: ಖಾಲಿ ಕೊಡ ಪ್ರದರ್ಶನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ, ಮತಿಘಟ್ಟ ಹಾಗು ಜುಟ್ಟನಹಳ್ಳಿ ವ್ಯಾಪ್ತಿಯ ಕೆರೆಗಳಿಗೆ ನೀರು ಹರಿಸಬೇಕು ಎಂದು ಆಗ್ರಹಿಸಿ ಬುಧವಾರ ಹಿರೀಸಾವೆಯ ಶ್ರೀಕಂಠಯ್ಯ ವೃತ್ತದಲ್ಲಿ ಖಾಲಿ ಕೊಡ ಪ್ರದರ್ಶಿಸಿ ರೈತರು ಪ್ರತಿಭಟನೆ ನಡೆಸಿದರು.

ಹಿರೀಸಾವೆ-ಜುಟ್ಟನಹಳ್ಳಿ ಏತ ನೀರಾವರಿ ಯೋಜನೆಯಡಿ ಡಿಪಿಆರ್ ಮೂಲಕ ನೀರು ಹರಿಸುತ್ತಿಲ್ಲ. ಕೆಲವೇ ಕೆರೆಗಳಿಗೆ ನೀರು ಬಿಡಲಾಗುತ್ತಿದೆ. ಇದುವರೆಗೆ ಎಷ್ಟು ಕ್ಯೂಸೆಕ್ ನೀರನ್ನು ಯಾವ ಕೆರೆಗೆ ಮತ್ತು ಎರಡು ಕಡೆಯ ಕಾಲುವೆಗಳಿಗೆ ಎಷ್ಟು ನೀರು ಹರಿದಿದೆ ಎಂಬ ಮಾಹಿತಿ ಇಲ್ಲ. ಕಾಲುವೆ ಒಡೆದು ನೀರು ಬಿಟ್ಟುಕೊಂಡಿರುವವರ ವಿರುದ್ಧ ಕ್ರಮ ಜರುಗಿಸಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಮಳೆ ಇಲ್ಲದೆ ಬರ ಪರಿಸ್ಥಿತಿ ತಾಂಡವಾಡುತ್ತಿದೆ. ಈಗಾಗಲೇ ಅಂತರ್ಜಲ ಮಟ್ಟ ಗಣನೀಯ ಪ್ರಮಾಣದಲ್ಲಿ ಕುಸಿದಿರುವುದರಿಂದ ಕೊಳವೆ ಬಾವಿಗಳು ಬತ್ತಿ ಹೋಗಿವೆ. ಕೃಷಿ ಚಟುವಟಿಕೆಗೆ ಭಾರೀ ಹಿನ್ನಡೆಯಾಗಿದೆ. ಪರಿಸ್ಥಿತಿ ಹೀಗೆ ಮುಂದುವರಿದರೆ ಕುಡಿಯಲು ನೀರು ಸಿಗುವುದಿಲ್ಲವೆಂದು ಪ್ರತಿಭಟನಾಕಾರರು ಹೇಳಿದರು.



ಕಾವೇರಿ ನಿಗಮದ ಕಾರ್ಯಪಾಲಕ ಎಂಜಿನಿಯರ್ ದೀಪು ಮಾತನಾಡಿ, ಸೆ. 1 ರಿಂದ ನೀರು ಹರಿಸಲಾಗುತ್ತಿದೆ. 56 ಕ್ಯೂಸೆಕ್ ನೀರ ಬರುತ್ತಿದ್ದು, ಈಗ ಸುಂಡಹಳ್ಳಿ ಮತ್ತು ಹೊಸಕೊಪ್ಪಲು ಕೆರೆಗಳಿಗೆ ತಲುಪಿದೆ. ಕಾಲುವೆ ಒಡೆದು ನೀರು ತುಂಬಿಸಿಕೊಳ್ಳುತ್ತಿರುವ ರೈತರನ್ನು ಮನವೊಲಿಸುವ ಪ್ರಯತ್ನ ಮಾಡಲಾಗಿದೆ. ಈ ಯೋಜನೆಯಲ್ಲಿ ಒಂದು ಕೆರೆ ತುಂಬಿ ಕೋಡಿ ಮೂಲಕ ಮುಂದಿನ ಕೆರೆಗೆ ನೀರು ಹರಿಯಬೇಕು ಎಂದರು. ಮುಂದಿನ ಎರಡು ದಿನಗಳ ನಂತರ ಮತಿಘಟ್ಟ ಕೆರೆಗೆ ನೀರು ಹರಿಸುವ ಪ್ರಯತ್ನ ಮಾಡಲಾಗುವುದು. ಅದಕ್ಕೆ ಎಲ್ಲಾ ಗ್ರಾಮಗಳ ರೈತರು ಸಹಕಾರ ನೀಡಬೇಕು. ಎಲ್ಲಾ ಕೆರೆಗಳಿಗೆ ಶೇ. 25 ರಷ್ಟು ನೀರು ಹರಿಸುವ ಪ್ರಯತ್ನ ಮಾಡಲಾಗುವುದು ಎಂದರು. ಅದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ರೈತರು ಗಲಾಟೆ ಶುರು ಮಾಡಿದರು. ಪರಿಸ್ಥಿತಿ ಶಾಂತಗೊಳಿಸಲು ಅಧಿಕಾರಿಗಳು ಹರಸಾಹಸಪಟ್ಟರು.

ರೈತರಾದ ನಾಗರಾಜು, ಬಿ.ಎಂ. ಮಂಜುನಾಥ್, ರೈತ ಸಂಘದ ರಘು, ಅಣ್ಣಪ್ಪಸ್ವಾಮಿ, ದಿಲೀಪ್, ನಂಜೇಗೌಡ, ರಂಗಸ್ವಾಮಿ, ನಾಗೇಶ್, ನಿಂಗೇಗೌಡ, ನಾಗರಾಜು, ನಿಂಗೇಗೌಡ, ಮತಿಘಟ್ಟ ರಂಗಸ್ವಾಮಿ ಮತ್ತಿತರರಿದ್ದರು.

# ನಾಲ್ಕೈದು ತಿಂಗಳಿಂದ ಬಾರದ ಪಿಂಚಣಿ ಹಣ

## ಅಡಕತ್ತರಿಯಲ್ಲಿ 98 ಸಾವಿರ ಜನರು | ದಾಖಲೆ ಪರಿಶೀಲನೆ ರಾಮಾಯಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಂದಾಯ ಇಲಾಖೆಯ ನಿಯಮಗಳು ಮತ್ತು ತಾಂತ್ರಿಕ ಕಾರಣಗಳಿಂದ ಜಿಲ್ಲಾದ್ಯಂತ 98, 850 ಫಲಾನುಭವಿಗಳಿಗೆ ಕಳೆದ ಹಲವು ತಿಂಗಳಿಂದ ಸಾಮಾಜಿಕ ಭದ್ರತೆಯ ಪಿಂಚಣಿ ಸ್ಥಗಿತಗೊಂಡಿದ್ದು ವಯೋವೃದ್ಧರು, ವಿಧವೆಯರು ಹಾಗೂ ಅಂಗವಿಕಲರು ಪರದಾಡುವಂತಾಗಿದೆ.

ಸರ್ಕಾರ ಪ್ರತಿ ತಿಂಗಳು ನೀಡುತ್ತಿದ್ದ ಪಿಂಚಣಿ ಹಣದಲ್ಲೇ ಬದುಕುತ್ತಿರುವವರಿಗೆ ದಿಢೀರ್ ಸ್ಥಗಿತದಿಂದ ತೊಂದರೆಯಾಗುತ್ತಿದೆ. ತಾಂತ್ರಿಕ ಕಾರಣಗಳನ್ನು ಮುಂದಿಟ್ಟುಕೊಂಡು ನಾಲ್ಕೈದು ತಿಂಗಳಿಂದ ಹಣ ಪಾವತಿಸದೆ ಇರುವುದು ಏಕೆ ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.

ಆದಾಯ ಮಿತಿ ಗೊಂದಲ: ಹಿಂದೆ ಪಿಂಚಣಿಗೆ ವಾರ್ಷಿಕ ಆದಾಯ ಮಿತಿ ಕಡಿಮೆಯಿದ್ದ ಕಾರಣ ಹಾಗೂ ಪರಿಶೀಲನೆ ವೇಳೆ ಉಂಟಾದ ವ್ಯತ್ಯಾಸಗಳಿಂದ ಹಲವರಿಗೆ ಪಿಂಚಣಿ ಹಣ ಬಂದಿಲ್ಲ. ಸರ್ಕಾರವು ವಾರ್ಷಿಕ ಆದಾಯ 40 ಸಾವಿರ ರೂ.ನಿಂದ 1.20 ಲ.ರೂ.ಗೆ ಹೆಚ್ಚಿಸಿದೆ. ಆಧಾರ್ ಜೋಡಣೆ ಹಾಗೂ ಜೀವಮಾನ ಪ್ರಮಾಣಪತ್ರ ಸಲ್ಲಿಕೆಯಲ್ಲಿ ತೊಂದರೆಗಳಾಗಿವೆ. ಹೀಗಾಗಿ ಮಾಸಾಶನವನ್ನೇ ನಂಬಿ ಬದುಕುತ್ತಿರುವ ಹಿರಿಯ ನಾಗರಿಕರು, ವಿಧವೆಯರು ಮತ್ತು ಅಂಗವಿಕರು ಹಣ ಸಿಗದೆ ನಿತ್ಯ ಕಚೇರಿಗೆ ಅಲೆಯುವಂತಾಗಿದೆ.

**ಪರಿಹಾರ ಕ್ರಮ ಏನು**

ಫಲಾನುಭವಿಗಳು ತಕ್ಷಣವೇ ತಮ್ಮ ಹತ್ತಿರದ ಗ್ರಾಮ ಒನ್, ಕರ್ನಾಟಕ ಒನ್ ಅಥವಾ ನಾಡಕಚೇರಿಗೆ ಭೇಟಿ ನೀಡಿ ಆಧಾರ್ ಮತ್ತು ಪಿಂಚಣಿ ಸ್ಥಿತಿಯನ್ನು ಪರಿಶೀಲಿಸಬೇಕು. ಅಗತ್ಯವಿರುವ ದಾಖಲೆಗಳನ್ನು ಅಥವಾ




ಇ-ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಿದೆ. ಆದರೆ ಈ ಪ್ರಕ್ರಿಯೆ ಸಾಕಷ್ಟು ಗೊಂದಲಗಳಿಂದ ಕೂಡಿದೆ. ವಯೋವೃದ್ಧರು ಸೇವಾ ಕೇಂದ್ರಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸರ್ವರ್ ಸಮಸ್ಯೆ, ವಿದ್ಯುತ್ ವ್ಯತ್ಯಯ, ಸಿಬ್ಬಂದಿ ಕೊರತೆ ಹೀಗೆ ನಾನಾ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಜೀವನಕ್ಕೆ ಆಧಾರವಾಗಿರುವ ಹಣಕ್ಕಾಗಿ ಫಲಾನುಭವಿಗಳು ನಿತ್ಯ ಕಚೇರಿಗೆ ಅಲೆಯುತ್ತಿದ್ದಾರೆ. ಆದರೆ ಸರ್ಕಾರ ಮಾತ್ರ ಪರಿಹಾರ ಕ್ರಮವನ್ನು ನಿಧಾನಗತಿಯಲ್ಲಿ ಮಾಡುತ್ತಿದೆಯೆಂಬ ಆರೋಪ ಕೇಳಿಬಂದಿದೆ.

ಇಂದಿರಾ ಗಾಂಧಿ ವೃದ್ಧಾಪ್ಯ ವೇತನ 60 ವರ್ಷಕ್ಕೆ 600 ರೂ., 65 ವರ್ಷದವರಿಗೆ 1200 ರೂ., ವಿಧವಾ ವೇತನ 800 ರೂ., ಅಂಗವಿಕಲರ ವೇತನ 800 (ಶೇ. 40 ರಿಂದ 74), ಶೇ. 75ರಷ್ಟು ಅಂಗವಿಕಲತೆಯಿಂದ ಬಳಲುತ್ತಿರುವವರಿಗೆ 1400 ರೂ., ಮಾನಸಿಕ ಅಸ್ವಸ್ಥರಿಗೆ 2 ಸಾವಿರ ರೂ., ಸಂಧ್ಯಾ ಸುರಕ್ಷಾ ಯೋಜನೆ 1200, ಮನಸ್ವಿನಿ ಯೋಜನೆಯಡಿ 800 ರೂ., ಮೈತ್ರಿ 800 ರೂ., ಆಸಿಡ್ ದಾಳಿಗೊಳಗಾದವರಿಗೆ 1 ಸಾವಿರ ರೂ., ರೈತರ ಆತ್ಮಹತ್ಯೆ ವಿಧವಾ ವೇತನ 2 ಸಾವಿರ ರೂ. ನೀಡಲಾಗುತ್ತಿದೆ.

ಪ್ರಸ್ತುತ ಇಂದಿರಾ ಗಾಂಧಿ ವೃಧಾಪ್ಯ ವೇತನದಡಿ 130080, ವಿಧವಾ ವೇತನ 64696, ಅಂಗವಿಕರು

**ಪಿಂಚಣಿ ಸೌಲಭ್ಯ ಕಡಿತ ಕುರಿತು ಮಾಹಿತಿ**

| ತಾಲ್ಲೂಕು | ಗೊಂದಲ | ದಾಖಲೆ ಸಲ್ಲಿಸಿದವರು | ಹೊರಗುಳಿದವರು |
|---|---|---|---|
| ಆಲೂರು | 9113 | 2345 | 6768 |
| ಅರಕಲಗೂಡು | 11530 | 2420 | 9110 |
| ಅರಸೀಕೆರೆ | 17434 | 12129 | 5305 |
| ಬೇಲೂರು | 9126 | 2620 | 6506 |
| ಚನ್ನರಾಯಪಟ್ಟಣ | 18068 | 7898 | 10170 |
| ಹಾಸನ | 18827 | 4534 | 14293 |
| ಹೊಳೆನರಸೀಪುರ | 9709 | 4766 | 4943 |
| ಸಕಲೇಶಪುರ | 5043 | 1675 | 3368 |

25183, ಸಂಧ್ಯಾ ಸುರಕ್ಷಾ ಯೋಜನೆಯಡಿ 74417, ಮನಸ್ವಿನಿ 4828, ಮೈತ್ರಿ 7 ಹಾಗು ಆಸಿಡ್ ದಾಳಿಗೆ ತುತ್ತಾದ ಒಬ್ಬರು ಮತ್ತು ರೈತರ ಆತ್ಮಹತ್ಯೆ ವಿಧವಾ ವೇತನ ಪಡೆಯುತ್ತಿರುವ 491 ಮಹಿಳೆಯರು ಜಿಲ್ಲೆಯಲ್ಲಿದ್ದಾರೆ.

**60 ಸಾವಿರ ಫಲಾನುಭವಿಗಳಿಗೆ ಕೋಕ್**

ಫಲಾನುಭವಿಗಳಲ್ಲಿ ಮೃತರು, ಆಧಾರ್ ಸಂಖ್ಯೆಗೆ ಬ್ಯಾಂಕ್ ಖಾತೆ ಜೋಡಣೆಯಾಗದೆ ಇರುವುದು, ಜಾತಿ ಮತ್ತು ಆದಾಯ ಪ್ರಮಾಣ ಪತ್ರದಲ್ಲಿ ಲೋಪ ಹೀಗೆ ನಾನಾ ಕಾರಣಗಳಿಂದ 60 ಸಾವಿರ ಫಲಾನುಭವಿಗಳಿಗೆ ಪಿಂಚಣಿ ಸೌಲಭ್ಯ ಸ್ಥಗಿತಗೊಳಿಸಲಾಗಿದೆ.

ಒಟ್ಟು 98850 ಫಲಾನುಭವಿಗಳ ದಾಖಲಾತಿಗಳನ್ನು ಪರಿಶೀಲನೆಗೆ ಒಳಪಡಿಸಲಾಗಿತ್ತು. ಅದರಲ್ಲಿ 38387 ಜನರ ದಾಖಲಾತಿಗಳು ಸರಿಯಾಗಿದ್ದು, ಅವರಿಗೆ ಪಿಂಚಣಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಇನ್ನು 60,463 ಜನರು ಅಗತ್ಯ ದಾಖಲಾತಿಗಳನ್ನು ಒದಗಿಸದೆ ಇರುವುದರಿಂದ ಅಂತವರನ್ನು ಫಲಾನುಭವಿ ಪಟ್ಟಿಯಿಂದ ಹೊರಗಿಡಲಾಗಿದೆ. ನಿಗದಿತ ದಾಖಲೆ ಪತ್ರಗಳನ್ನು ಒದಗಿಸಿದರೆ ಅವರು ಪಟ್ಟಿಯಲ್ಲಿ ಸ್ಥಾನ ಪಡೆಯುವ ಸಾಧ್ಯತೆಯಿದೆ.

# ಅರೇಹಳ್ಳಿಯಲ್ಲಿ ಎಸ್‌ಡಿಪಿಐ ನೂತನ ಕಚೇರಿ ಉದ್ಘಾಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಜನಪರ ಸೇವೆ ಹಾಗೂ ಸಾಮಾಜಿಕ ನ್ಯಾಯದ ಆಶಯದೊಂದಿಗೆ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಪಕ್ಷದ ನೂತನ ಕಚೇರಿಯನ್ನು ಬೇಲೂರು ತಾಲೂಕಿನ ಅರೇಹಳ್ಳಿಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಅಂಗಡಿ ಚಂದ್ರು ಉದ್ಘಾಟಿಸಿದರು.

ಈ ವೇಳೆ ಅಂಗಡಿ ಚಂದ್ರು ಮಾತನಾಡಿ, ಸಮಾಜದ ಎಲ್ಲ ಜಾತಿ, ವರ್ಗ ಹಾಗೂ ಸಮುದಾಯಗಳ ಜನರಿಗೆ ಸಾಮಾಜಿಕ ನ್ಯಾಯ ಮತ್ತು ಸಮಾನ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಪಕ್ಷ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವುದು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬಲಪಡಿಸುವುದು ಪಕ್ಷದ ಪ್ರಮುಖ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು ಪಕ್ಷದೊಂದಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಬೇಲೂರು ವಿಧಾನಸಭಾ ಕ್ಷೇತ್ರದ ಎಸ್‌ಡಿಪಿಐ ಅಧ್ಯಕ್ಷ ಅರ್ಷದ್ ಅರೇಹಳ್ಳಿ ಮಾತನಾಡಿ, ನೂತನ ಕಚೇರಿ ಕೇವಲ ಪಕ್ಷದ ಚಟುವಟಿಕೆಗಳಿಗೆ ಸೀಮಿತವಾಗದೆ ಅರೇಹಳ್ಳಿಯ ಎಲ್ಲಾ ನಾಗರಿಕರ ಸಮಸ್ಯೆಗಳಿಗೆ ಸ್ಪಂದಿಸುವ ಜನಪರ ಕಚೇರಿಯಾಗಿ ಕಾರ್ಯನಿರ್ವಹಿಸಲಿದೆ ಎಂದರು.

ಜಿಲ್ಲಾಧ್ಯಕ್ಷ ಇಮ್ರಾನ್ ಅರೇಹಳ್ಳಿ ಮಾತನಾಡಿ, ಅರೇಹಳ್ಳಿ ಭಾಗದಲ್ಲಿ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷದ ವತಿಯಿಂದ ಸ್ಪರ್ಧಿಸಲು ಸಿದ್ಧತೆ ನಡೆಸುತ್ತಿದ್ದು, ಸಮಾನ ಮನಸ್ಕ ನಾಗರಿಕರು ನಮ್ಮ ಅಭ್ಯರ್ಥಿಗಳನ್ನು ಬೆಂಬಲಿಸಬೇಕು ಎಂದರು.

ಪಕ್ಷದ ಉಪಾಧ್ಯಕ್ಷ ಸಂಗಪ್ಪ, ಯಂಗ್ ಡೆಮೋಕ್ರ್ಯಾಟ್ಸ್ ರಾಜ್ಯ ಸಮಿತಿ ಸದಸ್ಯ ಜಯಕುಮಾರ್ ಹಾದಿಗೆ, ಮುಖಂಡ ನಿಂಗರಾಜು ಇತರರಿದ್ದರು.

# ಕಸಾಯಿಖಾನೆಗೆ ಸಾಗಿಸುತ್ತಿದ್ದ 19 ಹಸು ರಕ್ಷಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಅಕ್ರಮವಾಗಿ 19 ಹಸುಗಳನ್ನು ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಹಿಂದು ಹಿತ ರಕ್ಷಣಾ ಸಮಿತಿ ಕಾರ್ಯಕರ್ತರು ಪೊಲೀಸರ ಸಹಕಾರದೊಂದಿಗೆ ವಾಹನವನ್ನು ತಡೆದು ಹಸುಗಳನ್ನು ರಕ್ಷಿಸಿದ ಘಟನೆ ತಾಲೂಕಿನ ಮಾರನಹಳ್ಳಿ ಚೆಕ್‌ಪೋಸ್ಟ್ ಬಳಿ ನಡೆದಿದೆ.

ಘಟನೆ ಕುರಿತು ಶಾಸಕ ಸಿಮೆಂಟ್ ಮಂಜು ಮಾತನಾಡಿ, ಕಳೆದ ರಾತ್ರಿ 19 ಹಸುಗಳನ್ನು ಕಸಾಯಿಖಾನೆಗೆ ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಹಿಂದು ಸಂಘಟನೆಗಳ ಮುಖಂಡರು ಹಸುಗಳನ್ನು ರಕ್ಷಿಸುವ ಕಾರ್ಯ ಮಾಡಿದ್ದಾರೆ ಎಂದು ಹೇಳಿದರು.

ಸಾಗಣೆ ವೇಳೆ ಹಸುಗಳನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಳ್ಳಲಾಗಿದೆ ಎಂದು ಆರೋಪಿಸಿದ ಅವರು, ಕೆಲವು ಹಸುಗಳ ಕಣ್ಣುಗಳಿಗೆ ಮೆಣಸಿನಕಾಯಿ ಹಾಕಿರುವುದು ಕಂಡುಬಂದಿದ್ದು ಇದು ಖಂಡನೀಯ ಎಂದರು.

ಪೊಲೀಸರು ಹಸುಗಳನ್ನು ವಶಕ್ಕೆ ಪಡೆದು ಸದ್ಯ ತಾತ್ಕಾಲಿಕವಾಗಿ ಸುರಕ್ಷಿತ ಸ್ಥಳದಲ್ಲಿ ಇರಿಸಿದ್ದು, ಅವುಗಳನ್ನು ಗೋ ಶಾಲೆಗೆ ಕಳುಹಿಸಿ ಸಂರಕ್ಷಿಸುವ ಕ್ರಮ ಕೈಗೊಳ್ಳಬೇಕು. ಯಾವುದೇ ಪ್ರಾಣಿಗಳನ್ನು ಈ ರೀತಿಯಾಗಿ ಹಿಂಸಿಸಬಾರದು ಎಂದು ಹೇಳಿದರು.

ಹಿಂದು ಹಿತ ರಕ್ಷಣಾ ಸಮಿತಿಯ ರಘು ಮಾತನಾಡಿ, ಮಾರನಹಳ್ಳಿ ಚೆಕ್ ಪೋಸ್ಟ್ ಬಳಿ ಈಚರ್ ವಾಹನದಲ್ಲಿ 19 ಹಸುಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿದೆ ಎಂಬ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಪೊಲೀಸರಿಗೆ ಮಾಹಿತಿ ನೀಡಲಾಗಿತ್ತು. ಅದರಂತೆ ಪೊಲೀಸರು ವಾಹನವನ್ನು ತಡೆದು ಹಸುಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ತಿಳಿಸಿದರು.

ಹಸುಗಳು ಚಲಿಸದಂತೆ ಹಾಗೂ ಮಂಪರ್‌ನಲ್ಲಿರುವಂತೆ ಮಾಡಲು ಅವುಗಳ ಕಣ್ಣುಗಳಿಗೆ ಮೆಣಸಿನಕಾಯಿ ಹಾಕಲಾಗಿದೆ ಎಂಬ ಆರೋಪ ಕೇಳಿಬಂದಿದ್ದು, ಪ್ರಾಣಿಗಳೊಂದಿಗೆ ಇಂತಹ ಕ್ರೂರ ವರ್ತನೆ ತೋರಿದವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಸೂಕ್ತ ಶಿಕ್ಷೆ ನೀಡಬೇಕು ಎಂದು ರಘು ಒತ್ತಾಯಿಸಿದರು.

ಹಾಸನ ಹಾಗೂ ಸಕಲೇಶಪುರ ಭಾಗದಲ್ಲಿ ಇಂತಹ ಅಕ್ರಮ ಜಾನುವಾರು ಸಾಗಾಟ ನಿರಂತರವಾಗಿ ನಡೆಯುತ್ತಿದೆ. ಪೊಲೀಸರು ಹೆಚ್ಚಿನ ನಿಗಾ ವಹಿಸಬೇಕು. ಜಾನುವಾರುಗಳು ಎಲ್ಲಿಂದ ಎಲ್ಲಿಗೆ ಸಾಗಿಸಲಾಗುತ್ತಿದೆ. ಸಾಗಾಟದ ಹಿಂದೆ ಯಾರಿದ್ದಾರೆಂಬುದರ ಕುರಿತು ಸಮಗ್ರ ತನಿಖೆ ನಡೆಸಬೇಕು. ವಿಶೇಷವಾಗಿ ರಾತ್ರಿ ಬೀಟ್ ವ್ಯವಸ್ಥೆ ಬಲಪಡಿಸುವುದರ ಜೊತೆಗೆ ಚೆಕ್ ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸಬೇಕು ಎಂದು ಆಗ್ರಹಿಸಿದರು.

# ವಿದ್ಯಾರ್ಥಿಗಳಿಗೆ ಪ್ರಚಲಿತ ವಿದ್ಯಮಾನದ ಅರಿವಿರಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ವಿದ್ಯಾರ್ಥಿಗಳು ಮೊಬೈಲ್ ಬಳಕೆಗೆ ಹೆಚ್ಚು ಸಮಯ ನೀಡದೆ, ಪ್ರತಿನಿತ್ಯ ದಿನಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಅದರಿಂದ ಪ್ರಚಲಿತ ವಿದ್ಯಮಾನಗಳ ಕುರಿತು ಜ್ಞಾನ ಹೆಚ್ಚುವುದರ ಜತೆಗೆ, ಶೈಕ್ಷಣಿಕ ಸಾಧನೆಗೂ ಸಹಕಾರಿಯಾಗಲಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಸಲಹೆ ನೀಡಿದರು.

ಪಟ್ಟಣದ ಶಾಲಿನಿ ಅಂತರಾಷ್ಟ್ರೀಯ ಶಾಲೆಯಲ್ಲಿ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ 13ನೇ ವರ್ಷದ ಮಕ್ಕಳ ಚಾವಡಿ ಮನೆ-ಮನ ಕಾರ್ಯಕ್ರಮ ಮತ್ತು ದೇಶಿಕಲೆ, ದೇಶಿ ಆಟ, ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳುವುದು ಅವರ ಶೈಕ್ಷಣಿಕ ಮತ್ತು ವೈಯಕ್ತಿಕ ಬೆಳವಣಿಗೆಗೆ ಅತ್ಯಂತ ಅವಶ್ಯಕವಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ವಾಚಕರ ವಾಣಿ, ಸಂಪಾದಕೀಯ, ಅಂಕಣ, ಕ್ರೀಡಾ ಸುದ್ದಿಗಳು ಪತ್ರಿಕೆಯ ಯಾವ ಭಾಗದಲ್ಲಿ ಪ್ರಕಟವಾಗುತ್ತವೆ. ಅವುಗಳ ಪ್ರಾಮುಖ್ಯತೆ ಏನು ಎಂಬುದನ್ನು ತಿಳಿದುಕೊಳ್ಳಬೇಕು.

ಇಂದಿನ ಒತ್ತಡದ ಬದುಕಿನಲ್ಲಿ ಪುಸ್ತಕ, ಪತ್ರಿಕೆ




ಓದುವ ಅಭಿರುಚಿ ಕಳೆದುಕೊಳ್ಳುತ್ತಿದ್ದೇವೆ. ಪುಸ್ತಕಗಳು ನಮ್ಮ ಜ್ಞಾನ ವೃದ್ಧಿಸುವ ಸ್ನೇಹಿತರಾಗಿವೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪುಸ್ತಕಗಳು ಸಹಕಾರಿ ಓದುವ ಅಭಿರುಚಿಯನ್ನು ಎಲ್ಲರೂ ಬೆಳೆಸಿಕೊಳ್ಳಬೇಕು.

ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಅತಿಯಾದ ಮೊಬೈಲ್ ಬಳಕೆಯಿಂದ ಅನುಕೂಲಗಳಿಗಿಂತ ಅನಾನುಕೂಲಗಳೇ ಹೆಚ್ಚು. ತಂತ್ರಜ್ಞಾನ ನಮಗೆ ಜಗತ್ತನ್ನೇ ಕೈಬೆರಳ ತುದಿಗೆ ತಂದುಕೊಟ್ಟಿದ್ದರೂ, ಅದರ ಅತಿಯಾದ ಮತ್ತು ತಪ್ಪು ಬಳಕೆ ನಮ್ಮ ಜೀವನದ ಮೇಲೆ ಗಂಭೀರವಾದ ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಮಕ್ಕಳ ಸಾಹಿತ್ಯ ಪರಿಷತ್ತಿನ ಪಾತ್ರ ಅತ್ಯಂತ ಅಪಾರ ಮತ್ತು ಮಹತ್ವದ್ದಾಗಿದೆ. ಬಾಲ್ಯದಲ್ಲಿ ಮಕ್ಕಳ ಮನಸ್ಸು ಮೃದುವಾದ ಮಣ್ಣಿನಂತಿರುತ್ತದೆ. ಆ ಸಮಯದಲ್ಲಿ ಅವರಿಗೆ ಎಂತಹ ಸಂಸ್ಕಾರ ಮತ್ತು ಜ್ಞಾನವನ್ನು ನೀಡುತ್ತೇವೆಯೋ, ಅದೇ ಅವರ ಭವಿಷ್ಯದ ವ್ಯಕ್ತಿತ್ವಕ್ಕೆ ಬುನಾದಿಯಾಗುತ್ತದೆ. ಈ ನಿಟ್ಟಿನಲ್ಲಿ ಮಕ್ಕಳ ಸಾಹಿತ್ಯ ಪರಿಷತ್ತು ನಿರಂತರವಾಗಿ ಶ್ರಮಿಸುತ್ತಿದ ಮಕ್ಕಳಿಗಾಗಿ ಕವಿಗೋಷ್ಠಿ, ನಾಟಕೋತ್ಸವ ಮತ್ತು ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸುತ್ತದೆ. ಇದು ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಹೊರತರಲು ಮತ್ತು ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಲು ಸಹಕಾರಿಯಾಗಿದೆ. ನಾಡಿನ ಹಬ್ಬಗಳು, ಸಂಪ್ರದಾಯಗಳು, ಗ್ರಾಮೀಣ ಕಲೆ, ಕ್ರೀಡೆ ಮತ್ತು ಇತಿಹಾಸವನ್ನು ಸರಳ ಭಾಷೆಯಲ್ಲಿ ಮಕ್ಕಳಿಗೆ ತಲುಪಿಸುವ ಮೂಲಕ, ಅವರು ತಮ್ಮ ಬೇರುಗಳನ್ನು ಮರೆಯದಂತೆ ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸುತ್ತಿದೆ ಎಂದು ಶ್ಲಾಘಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎಚ್.ಸತೀಶ್ ಮಾತನಾಡಿ, ಮಕ್ಕಳಿಗೆ ಗ್ರಾಮೀಣ ಕಲೆಗಳ ವಿಶೇಷತೆಗಳನ್ನು ಪರಿಚಯ ಮಾಡಿಕೊಡಬೇಕು. ನಮ್ಮ ನೆಲದ ಗಟ್ಟಿತನ ಉಳಿಸಲು ಮೂಲ. ಜನಪದವನ್ನು ಬೆಳೆಸಬೇಕು. ಗ್ರಾಮೀಣ ಕಲೆಗಳನ್ನು ಮಕ್ಕಳಿಗೆ ಪರಿಚಯಿಸಬೇಕು ಎಂದರು.

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಗೆ ಸಾಂಸ್ಕೃತಿ ಕಾರ್ಯಕ್ರಮ ಮತ್ತು ದೇಸಿ ಕ್ರೀಡೆಗಳನ್ನು ಆಯೋಜಿಸಲಾಗಿತ್ತು, ಮಕ್ಕಳ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಸಿ.ಎನ್. ಅಶೋಕ್, ಗೌರವಾಧ್ಯಕ್ಷ ಮಹದೇವ್, ಕಾರ್ಯದರ್ಶಿ ಸಿದ್ದೇಶ್, ವಿದ್ಯಾರ್ಥಿ ಪ್ರತಿನಿಧಿಗಳಾದ ಪೂರ್ಣಾ, ಉನ್ನತಿ ಹೆಗ್ಗಡೆ, ಲತಾಪುಟ್ಟೇಗೌಡ, ದೀಪ್ತಿ, ಸಿ.ಪಿ.ಕುಮಾರ್, ಅಜ್ಜು ಗಂಗಾಧರ್ ಇತರರಿದ್ದರು.

# ಬೇಳೇಸಾರೆಂತಕೆ, ತೊಳಿಯಕ್ಕಾ – 3

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-2**

ನಮ್ಮ ಸ್ಥಾನವಾದರೂ ಏನು? ತನ್ನ ಅಹಂಗಿಂತಲೂ ಮಾನವೀಯ ಸಂಬಂಧ ಮುಖ್ಯ ಎಂಬುದನ್ನು ತಾನು ಗೌರವಿಸಬೇಕೆಂದು ಅಂದುಕೊಂಡರೂ ಮನೆಯೊಳಗೆ ಹೋಗದೇ ಅಲ್ಲೇ ಮಳೆನೀರಿಗೆಂದು ಹಾಕಿದ್ದ ಅಡಕೆ ಮರದ ದೋಣಿಯ ಗೂಟಕ್ಕೆ ನೇತುಹಾಕಿದ್ದ ಹಾಲುಸೋರೆಕಾಯಿಯ ಬುರುಡೆಯನ್ನು ತೆಗೆದುಕೊಂಡು ನೀರ್ರಾಕುಸುಕೊಳ್ಳದ ಹಳ್ಳದ ಗುಂಟ ಇಳಿದುಹೋದ. ಹಳ್ಳದ ಬಳಿ ನಿರ್ಮಿಸಿದ್ದ ಸ್ನಾನದ ಮನೆಗೆ ಹೋಗಲೆಂದು ಮಾಡಿದ್ದ ಕಿರಿದಾದ ದಾರಿಯಲ್ಲಿ ಎಚ್ಚರಿಕೆಯಿಂದ ಇಳಿಯುತ್ತಿದ್ದವನ ಎಡಬುಜದ ಮೇಲೆ ಹೆಬ್ಬಲಸಿನ ಹಣ್ಣೊಂದು ಬಜಕ್ ಎಂದು ಬಿದ್ದು ತೊಟ್ಟಿದ್ದ ನೀಲಿ ಷರಟಿನ ಮೇಲೆ ಯಾವುದೋ ಪ್ರಾಣಿ ಉಚ್ಛಿಷ್ಠ ಮಾಡಿದಂತೆ ಗಲೀಜು ಮಾಡಿತು. ಆಥತ್ತೇರಿಟ ಎಂದು ಬೆರಳಿನಿಂದ ಸವರಿ, ವರೆಸಿ ಕೊಡವಿ ಬೆರಳನ್ನೊಮ್ಮೆ ಮೂಸಿಕೊಂಡ. ಭುಜದ ಮೇಲೆ ಬಿದ್ದು ನೆಲಸೇರಿದ ಅರ್ಧ ತಿಂದ ಹೆಬ್ಬಲಸಿನ ಹಣ್ಣಿನ ಅಳಿದುಳಿದ ಅವಶೇಷವನ್ನು ನೋಡಿ, ತಲೆಯೆತ್ತಿ ಮುಕ್ಕಾಲೆಕರೆಯಗಲಕ್ಕೆ ಹರಡಿಕೊಂಡಿದ್ದ, ಮರದ ಕೊಂಬೆ ಕೊಂಬೆಗಳನ್ನು ದಿಟ್ಟಿಸಿದ. ಇಪ್ಪತ್ತಕ್ಕೂ ಹೆಚ್ಚು ಮಂಗಗಳು ಮರದ ವಿವಿಧೆಡೆಯಲ್ಲಿ ಕುಳಿತು ಹಣ್ಣನ್ನು ಬಿಡಿಸಿ ತಿಂದು, ಹೊರಭಾಗದ ತೊಗಟೆಯನ್ನು ನಡುವಿನ ಮಾಡದ ಸಮೇತ ಕೆಳಗೆ ಎಸೆಯುತಿದ್ದವು. ಕೆಳಗೆ ಬೀಳುವ ಆ ಹಣ್ಣಿನ ಬೀಜದ ಬದುಕು ಮರದಿಂದ ಬಿದ್ದಕೂಡಲೇ ಕೊನೆಯಾಗದು, ನೆಲ ಸೇರಿ, ತರಗೆಲೆಗಳ ಅಡಿಯ ಹಸಿಮಣ್ಣನ್ನು ತಾಕಿದೊಡನೆಯೇ ಅದೊಂದು ಹೊಸ ಬದುಕಿನಾರಂಭ, ಪ್ರತೀ ಪತನವೂ ಒಂದು



ನವಜೀವನದ ಆರಂಭವಲ್ಲವೇ ಎಂದೆನಿಸಿತು ಬೋಬಯ್ಯನಿಗೆ. ಆ ಕೊಳ್ಳದ ಅಡಿಯಿಂದ ಆಗಸದೆತ್ತರಕ್ಕೆ ಅಗಾಧವಾಗಿ ಬೆಳೆದಿದ್ದ ಹೆಬ್ಬಲಸಿನ ಮರದ ತುಂಬಾ ಸಾವಿರಾರು ಹಣ್ಣುಗಳಿದ್ದವು. ನೋಡಲು ಥೇಟ್ ಹಲಸಿನ ಕಾಯಿಯಂತೆಯೇ ಇರುವ ಇದರ ಹಣ್ಣುಗಳು ಮುಷ್ಠಿಗಿಂತ ಕೊಂಚ ದೊಡ್ಡವಿರುತ್ತವೆ. ಮಂಗಗಳು, ಕೆಂಜಳಿಲು, ಹತ್ತಾರು ಬಗೆಯ ಪಕ್ಷಿಗಳು, ಕೀಟಗಳಿಗೆ ಆಹಾರವಾಗುವ ಈ ಹೆಬ್ಬಲಸಿನ ಹಣ್ಣುಗಳು ಆ ಸೀಸನ್ನಿನಲ್ಲಿ ಕಾಡಿನ ಅಪಾರ ಜೀವಸಂಕುಲವನ್ನೂ ಪೋಷಿಸುವ ಸಾರ್ಥಕ ಕಾರ್ಯ ಮಾಡುತ್ತವೆ. ಹಣ್ಣನ್ನು ಬಿಡಿಸಿ, ಬೀಜದ ಸಹಿತ ತೊಳೆಗಳನ್ನು ನುಂಗುವ ಮಂಗ, ಅಳಿಲು, ಪಕ್ಷಿಗಳು ವಿಸರ್ಜನೆಯ ಮೂಲಕ ಬೀಜ ಪ್ರಸಾರ ಮಾಡಿ ಕಾಡಿನಿಡೀ ಮುಂದುವರೆಯಲು ಸಹಕರಿಸುತ್ತವೆ. ಬೀಜ ಮೊಳಕೆಯೊಡೆಯುವಾಗ ನಿಶ್ಯಬ್ದವಾಗಿರುತ್ತದೆ. ಸಾವಕಾಶವಾಗಿ ಬೇರಿಳಿಸಿ ಬುಡವನ್ನು ರಂಧ್ರ ಮಾಡಿಕೊಳ್ಳುತ್ತದೆ. ಆದರೆ ಅಗಾಧ ಗಾತ್ರದ ಮರ ಬೀಳುವಾಗ ಎಲ್ಲಿಲ್ಲದ ಆರ್ತನಾದ ಹೊರಡಿಸುತ್ತದೆ. ಮೇರೆ ಮೀರಿದ ಸದ್ದಿನೊಂದಿಗೆ ದಯನೀಯವಾಗಿ ನೆಲಕ್ಕುರುಳುತ್ತದೆ. ನಾಶ ಗದ್ದಲವೇಳಿಸಿದರೆ, ಸೃಷ್ಟಿ ಮೌನವಾಗೇ ಸಿದ್ಧಿ ಸಾಧಿಸುತ್ತದೆ. ಇದೇ ಅಲ್ಲವೇ ದೈವಿಕ ಶಕ್ತಿ ಎಂದುಕೊಂಡ ಬೋಬಯ್ಯ ಭಾವಪರವಶನಾಗುತ್ತಾನೆ. ಸಾಧಾರಣ ರೂಪಿನ ಸಾಮಾನ್ಯರಲ್ಲಿ ಸಾಮಾನ್ಯನಾದ ನನ್ನೊಡನೆ ದೇವಕಿ ಎಂಬ ಸುಂದರಿಯೊಬ್ಬಳು ಎಂದಿಗೂ ಸಿಡಿಮಿಡಿಗೊಳ್ಳದೇ, ತಿರುಗಿ ಮಾತನಾಡದೇ ತನ್ನೆಲ್ಲಾ ಎಡವಟ್ಟುಗಳೊಡನೆಯೇ ಸಹಿಸಿಕೊಂಡು ಇಷ್ಟು ವರ್ಷ ಬಾಳುವೆ ಮಾಡಿದ್ದಾಳೆಂದರೆ, ನಾನವಳಿಗೆ ಅರ್ಹನೇ? ಎಂದು ಆಲೋಚಿಸತೊಡಗಿದ. ಇಷ್ಟು ವರ್ಷ ಆಕೆ ತನಗೆ ತೋರಿದ ಕಾಳಜಿಯನ್ನು ನೆನೆದು, ತಾನು ಈವರೆವಿಗೆ ಅವಳೊಡನೆ ನಡೆದುಕೊಂಡ ಸನ್ನಿವೇಶಗಳನ್ನು ಮನರವಲೋಕನ ಮಾಡಿಕೊಂಡ ಬೋಬ ಖಿನ್ನನಾದ. ಅಷ್ಟರಲ್ಲಿ ಪಕ್ಕದ ಪೊದೆಯೊಳಗಿನಿಂದ ಕಾಡುಕೋಳಿಯೊಂದು ಕ್ಕೆಕ್ಕೆಕ್ಕೇಕೇ ಎಂದು ಕ್ಯಾಕರಿಸಿ ಹಾರಿಹೋದಾಗಲೇ ಬೋಬಯ್ಯನಿಗೆ ತಾನು ಎಲ್ಲಿರುವೆ ಎಂದು ನೆನಪಾದದ್ದು. ಮರದ ಮೇಲಿನಿಂದ ಬೀಳುವ ಹಣ್ಣಿನ ಬೀಜ, ಅದ ತಿನ್ನಲು ಬರುವ ಹುಳಹುಪ್ಪಟೆಗಳು, ಹಣ್ಣು ಕರಗಿ ಗೊಬ್ಬರವಾದಾಗ ಆ ಗೊಬ್ಬರದಲ್ಲಿರಬಹುದಾದ ಅಸಂಖ್ಯಾತ ಕ್ರಿಮಿಕೀಟಗಳನ್ನು ತಿಂದು ಆನಂದತುಂದಿಲವಾಗಿದ್ದ ಇನ್ನೂ ಮೂರ್ನಾಲ್ಕು ಕಾಡುಕೋಳಿಗಳು ಕ್ಯಾಕರಿಸುತ್ತಾ ಹಾರಿ ಎತ್ತರದ ಗಿಡಗಳನ್ನೇರಿ ಪೊದೆಗಳಲ್ಲಿ ಮರೆಯಾದವು. ಹಾಗೇ ಹೊಸತಾಗಿ ನೋಡುತ್ತಿರುವನೇನೋ ಎಂಬಂತೆ ಅಗಾಧವಾಗಿ ಆವರಿಸಿದ್ದ ಆ ಮಹಾವೃಕ್ಷಗಳನ್ನು ನಿರುಕಿಸುತಿದ್ದವನಿಗೆ ಆಕಸ್ಮಿಕವೇನೋ ಎಂಬಂತೆ ಮಡಹಾಗಲಕಾಯಿಗಳು ತೂಗುತ್ತಿದ್ದ ಬಿಳಲೊಂದು ಗೋಚರಿಸಿತು. ತೀರಾ ಅಪರೂಪವಾಗಿ ಸಿಗುವ ಮಡಹಾಗಲಕಾಯಿ ತನ್ನ ಅಪೂರ್ವ ರುಚಿಗೆ ಹೆಸರಾಗಿದೆ. ಈ ಬಳ್ಳಿ ಇರುವ ಜಾಗವನ್ನು ಬೆಳೆ ನೀಡಿದ ನಂತರ, ಬೆಂಕಿ ಹಾಕಿ ಸುಟ್ಟರೆ, ಮುಂದಿನ ಮಳೆಗಾಲದ ಶುರುವಿನಲ್ಲಿ ಮಣ್ಣೊಳಗಿನ ಇದರ ಗೆಡ್ಡೆ ಮತ್ತೆ ಚಿಗುರಿ ಸೊಂಪಾಗಿ ಬೆಳೆಯುತ್ತೆ ಅಂತಾರೆ. ತನಗೆ ಅಚ್ಚುಮೆಚ್ಚಿನ ವನೋತ್ಪತ್ತಿ ಆಕಸ್ಮಿಕವಾಗಿ ಸಿಕ್ಕಿದ ಖುಷಿಯಲ್ಲಿ ಬೋಬಣ್ಣ ತನ್ನೆದುರಿನ ಬೀಳಿನಲ್ಲಿ ಅರವತ್ತೆಪ್ಪತ್ತು ಕಾಯಿಗಳು ಜೋತು ಬಿದ್ದಿದ್ದರೂ ತನಗೆ ಬೇಕಿದ್ದ ಹಾಗೂ ತನ್ನ ಕೈ ಎಟುಕಿಗೆ ಸಿಕ್ಕಿದ ಎಂಟ್ಹತ್ತು (ಮುಂದುವರಿಯುವುದು)

## ಇತಿಹಾಸದಲ್ಲಿ ಈ ದಿನ

**ಸೆಪ್ಟೆಂಬರ್-10**

1793: ಈ ದಿನದ ಅವಧಿಯಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ದಕ್ಷಿಣ ಭಾರತದಲ್ಲಿ ತನ್ನ ಆಡಳಿತಾತ್ಮಕ ಮತ್ತು ವ್ಯಾಪಾರಿಕ ಪ್ರಭಾವವನ್ನು ಮತ್ತಷ್ಟು ವಿಸ್ತರಿಸುತ್ತಿತ್ತು.

1846: ಎಲಿಜಬೆತ್ ಬ್ಯಾರಟ್ ಮತ್ತು ರಾಬರ್ಟ್ ಬ್ರೌನಿಂಗ್ ವಿವಾಹ ಪ್ರಸಿದ್ಧ ಇಂಗ್ಲಿಷ್ ಕವಯತ್ರಿ ಎಲಿಜಬೆತ್ ಬ್ಯಾರಟ್ ಬ್ಯಾರಟ್ ಮತ್ತು ಕವಿ ರಾಬರ್ಟ್ ಬ್ರೌನಿಂಗ್ ವಿವಾಹವಾದರು.

1892: ಅಮೆರಿಕದ ಭೌತಶಾಸ್ತ್ರಜ್ಞ ಆರ್ಥರ್ ಹಾಲಿ ಕಾಮ್ಟನ್ ಜನಿಸಿದರು. ಎಕ್ಸ್ ಕಿರಣಗಳ ಕುರಿತ ಸಂಶೋಧನೆಗಾಗಿ 1927ರಲ್ಲಿ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿ ಪಡೆದರು.

1976: ಭಾರತೀಯ ಚಿತ್ರರಂಗದ ನಟಿ ಗೌರಿ ಖಾನ್ ಜನನ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248